# ಭರವಸೆಯ ಪಥದಲ್ಲಿ ಐರಾ ಹೆಜ್ಜೆ

ಕನ್ನಡ, ತಮಿಳು ಸಿನಿಮಾಗಳಲ್ಲಿ ಅಭಿನಯಿಸಿರುವ ಭಟ್ಕಳದ ಚೆಲುವೆ ಐರಾ ಕೃಷ್ಣ, ಈಚೆಗೆ 'ಕಾಂತಾರ–1' ಸಿನಿಮಾದಲ್ಲಿ ಪುಟ್ಟ ಪಾತ್ರವೊಂದರ ಮೂಲಕ ಗಮನಸೆಳೆದವರು. ಕನ್ನಡ ಸಿನಿಮಾರಂಗದಲ್ಲಿ ಮತ್ತಷ್ಟು, ಮಗದಷ್ಟು ಸಿನಿಮಾಗಳನ್ನು ಮಾಡುತ್ತಾ, ಉತ್ತಮ ಕಥೆಗಳ ಭಾಗವಾಗುವ ಅಭಿಲಾಷೆ ಹೊಂದಿರುವ ಅವರು, 'ಸುಧಾ'ದೊಂದಿಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ.



■ ಸುಮಲತಾ ಎನ್

## ಹೊಸ ತಿರುವಿನಲ್ಲಿ ಅದ್ವಿತಿ ಶೆಟ್ಟಿ

'ಮಿಸ್ಟರ್ ಆ್ಯಂಡ್ ಮಿಸಸ್ ರಾಮಾಚಾರಿ' ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟ ನಟಿ ಅದ್ವಿತಿ ಶೆಟ್ಟಿ, ಸದ್ಯ ತುಳು ಸಿನಿಮಾವೊಂದರಲ್ಲಿ ನಟಿಸುತ್ತಿದ್ದಾರೆ. 'ಜೈ' ಎಂಬ ತುಳು ಸಿನಿಮಾದಲ್ಲಿ ರೂಪೇಶ್ ಶೆಟ್ಟಿ ಜೊತೆ ಅವರು ನಟಿಸುತ್ತಿದ್ದು, ಈಗಾಗಲೇ ಬಿಡುಗಡೆಯಾಗಿರುವ ಸಿನಿಮಾದ ಹಾಡಿನ ಮೂಲಕ ಗಮನಸೆಳೆದಿದ್ದಾರೆ. ಸಿನಿಮಾದಲ್ಲಿ ಅದ್ವಿತಿ ವರದಿಗಾರಳಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ಈ ಸಿನಿಮಾ ಬಗ್ಗೆ ಮಾತನಾಡಿರುವ ಅದ್ವಿತಿ, ''ನನಗೆ ಕಥೆ ಬಹಳ ಮುಖ್ಯ ಅಂಶ. ಬಹುದೊಡ್ಡ ಪ್ರೇಕ್ಷಕ ವರ್ಗವನ್ನು ಈ ತುಳು ಸಿನಿಮಾ ಮುಟ್ಟಬೇಕು ಎಂದು ಬಯಸುತ್ತೇನೆ. ನನ್ನ ಪ್ರತಿಭೆಯನ್ನು ತೋರಲು ಹಾಗೂ ಭಾಷೆಯೆಡೆಗಿನ ನನ್ನ ಪ್ರೀತಿಯನ್ನು ವ್ಯಕ್ತಪಡಿಸಲು 'ಜೈ' ಅತ್ಯಂತ ಸೂಕ್ತ ಸಿನಿಮಾ ಅನಿಸಿತು. ಈ ಸಿನಿಮಾ ಪ್ರೇಕ್ಷಕರಿಗೆ ಕನೆಕ್ಟ್ ಆಗಲಿದೆ'' ಎಂದು ಹೇಳಿದ್ದಾರೆ. ಈ ಸಿನಿಮಾ ಅವಕಾಶಕ್ಕಾಗಿ ರೂಪೇಶ್ ಶೆಟ್ಟಿ ಅವರಿಗೆ ಧನ್ಯವಾದವನ್ನೂ ತಿಳಿಸಿದ್ದಾರೆ.

ಆರ್‌ಎಸ್ ಸಿನಿಮಾಸ್ ವತಿಯಿಂದ ಈ ಸಿನಿಮಾ ತಯಾರಾಗುತ್ತಿದ್ದು, ಕನ್ನಡದಲ್ಲಿಯೂ ಬಿಡುಗಡೆಯಾಗಲಿದೆ. 'ದೊಡ್ಮನೆ ಹುಡುಗ', 'ಗಿರಿಗಿಟ್ಲೆ', 'ಸುಳಿ', 'ಶುಗರ್ ಫ್ಯಾಕ್ಟರಿ', 'ಐರಾವನ್', 'ಧೀರಸಾಮ್ರಾಟ್', 'ಬ್ರಹ್ಮಕಮಲ', 'ಕ್ಯಾಡ್‌ಬರೀಸ್' ಹಾಗೂ 'ರೇಸರ್' ಸಿನಿಮಾಗಳಲ್ಲಿ ಅದ್ವಿತಿ ನಟಿಸಿದ್ದಾರೆ. ■

